

ಮಾಡೋಕ್ ಈ ಸರ್ಕಾರ್ ಅಪ್ಪಣೆ ಬೇಕಂತೆ, ಸ್ಮಾರ್ಟ್ ಸಿಟಿ ಮಾಡಿ ಅಂದ್ರೆ ಇಡೀ ಊರೇ ನಮ್ದು ಅಂತಾನಲ್ಲ!' ಅಂತ ಗಟ್ಟಿಯಾಗಿ ಕೂಗಿದಳು.

ಜನ ತಲೆಗೊಂದೊಂದು ಮಾತಾಡಹತ್ತಿದರು. ಬೈಕು, ಕಾರು, ಸೈಕಲ್ಲಿನಲ್ಲಿ ಸಾಗುತ್ತಿದ್ದವರು ವಾಹನಗಳನ್ನು ನಿಲ್ಲಿಸಿ ಕೆಳಗಿಳಿದರು. ನಡೆಯುತ್ತಿರುವ ತಮಾಷೆ ನೋಡಲು ಜನ ಜಮಾಯಿಸತೊಡಗಿದಂತೆ ಬಂದಿದ್ದ ಪೊಲೀಸು ಪ್ಯಾದೆ ಮುಜುಗರಕ್ಕೆ ಸಿಲುಕಿದ.

'ನಾನು ಸ್ಪಾಟ್ನಲ್ಲಿದ್ದೀನಿ ಸರ್... ಅವ್ರ ಕೆಲ್ಸದೋರು ಬಂದು ನಿಂತಿದ್ದಾರೆ ಸರ್... ಊನ್ಸಾರ್... ಈಯಮ್ಮ ಬಾಳನೇ ಕೂಗಾಡ್ತಾ ಅವ್ರೆ. ಅದೇನೋ ನೀವ್ನೀವೆ ಬಗೆ ಹರಿಸ್ಕಳಿ. ಸರ್.... ಏನೋ ಒಂದಿಷ್ಟ್ ರಾಜಿ ಮಾಡ್ಕಳಿ... ಬರ್ಲಾ?' ಅಂತ ಫೋನಾಯಿಸಿದ ಪೊಲೀಸು ಕ್ಯಾಮೆರಗಳಿಂದ ಮುಖ ಮರೆಸಿಕೊಂಡು ಬೈಕೇರಿ ಕಣ್ಮರೆಯಾಗ್ಬಿಟ್ಟ.

ಅದುವರೆಗೆ ಮುಂಬೈನಲ್ಲಿದ್ದೇನೆ ಎಂದಿದ್ದ ಜೂನಿಯರ್ ಮೂರೇ ನಿಮಿಷದಲ್ಲಿ ಅಲ್ಲಿ ಪ್ರತ್ಯಕ್ಷನಾದ. ಮೂರ್ತಿಯ ಮುಖ ಬಿಳಚಿಕೊಂಡಿತು. ಸರ್ಕಾರ್ ಮುಂಬೈಗೆ ಹೋಗಿಲ್ಲ ಅಂತ ಹೆಂಡತಿಗೆ ಹೇಗೆ ತಿಳೀತು? ಅಂತ ಆಶ್ಚರ್ಯಪಟ್ಟ. ತನ್ನನ್ನು ಹೆಂಡತಿಯ ಮುಂದೆ ಬಕರಾ ಮಾಡಲು ಪ್ರಯತ್ನಿಸಿ ಮಾನ ಕಳೆದನಲ್ಲ ಅಂತ ಹಲ್ಲು ಕಡಿದ.

ಗೀತಾ ಅವನೆದುರೇ ಜೆಸಿಬಿಯವನಿಗೆ ಫೋನ್ ಮಾಡಿ ಮಾತಾಡತೊಡಗಿದಳು.

ಗಾಬರಿ ಬಿದ್ದ ಜೂನಿಯರ್ 'ಮೇಡಂ ಇರಿ, ನಾವೇ ಕರೆಸ್ತೀವಿ' ಎಂದು ಅರ್ಧ ಗಂಟೆಯಲ್ಲಿ ಜೆಸಿಬಿಯೊಂದನ್ನು ಕರೆಸಿದ. ಅನ್ಯಾಯವಾಗಿ ಜೆಸಿಬಿ ಡ್ರೈವರಿನ ಅಮ್ಮನನ್ನು ತನ್ನ ಮಾತಲ್ಲೇ ಸಾಯಿಸಿದ್ದ ಜೂನಿಯರ್ ಅಪ್ಪನಂತೆಯೇ ಎನ್ನುವ ವಿಚಾರ ಆಗಷ್ಟೆ ಮೂರ್ತಿಯ ಅರಿವಿಗೆ ನಿಲುಕಿತು.